## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

**ಸಂ.ಕಂ/ಹಬ/ವಿವಾದ/30/2010-11** **ದಿ:01-08-2016**

ವಾದಿಗಳು ವಿರುದ್ಧ ಪ್ರತಿವಾದಿಗಳು

**ಹಂಡಿ ಸಿದ್ದಪ್ಪ ತಂದೆ ನಿಂಗಪ್ಪ**
**27 ನೇ ವಾರ್ಡ್, ಸಿರುಗುಪ್ಪ**

**ಟಿ.ಸಿರಾಜುದ್ದೀನ್ ತಂದೆ ಅಬ್ದುಲ್‌ರಜಾಕ್‌ಸಾಬ್**
**04 ನೇ ವಾರ್ಡ್, ಸಿಂಧನೂರು ರಸ್ತೆ. ಸಿರುಗುಪ್ಪ**

**ದಾವಾ ಜಮೀನಿನ ವಿವರ**

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಸಿರುಗುಪ್ಪ | 490<br>494 | 2-41<br>2-54 | ವಿಎನ್‌ಸಿ-ತರಿ<br>ವಿಎನ್‌ಸಿ-ತರಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಸಿರುಗುಪ್ಪ ಗ್ರಾಮದ ಸ,ನಂ.490 ವಿ:2-41, ಸ,ನಂ.494, ವಿ:2-54 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ **ಎನ್.ರಂಗಾರೆಡ್ಡಿ ತಂದೆ ಹುಚ್ಚಾರೆಡ್ಡಿ** ಹೆಸರಿಗೆ ಪಟ್ಟಾ ಇದ್ದು, ನೋಂದಣಿ ಕ್ರಯಪತ್ರ ಸಂಖ್ಯೆ:1115/2010-11 ದಿ:11-06-2010 ರ ಪ್ರಕಾರ **ಟಿ.ಸಿರಾಜುದ್ದೀನ್ ತಂದೆ ಅಬ್ದುಲ್‌ರಜಾಕ್‌ಸಾಬ್** ಇವರು ಕ್ರಯ ಹೊಂದಿರುವ ಮೇರೆಗೆ, ಕ್ರಯದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಸಿರುಗುಪ್ಪ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಯ ಮುಂಚೆ **ಹಂಡಿ ಸಿದ್ದಪ್ಪ ತಂದೆ ನಿಂಗಪ್ಪ** ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿ:30-07-2010 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:40/2010-11 ದಿ:30-08-2010 ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:02-02-2011 ರಿಂದ ದಿ:30-05-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ತಕರಾರುದಾರರ ವಾದ ಪ್ರಕಾರ ಸದ್ರಿ ಜಮೀನನ್ನು ಈ ಹಿಂದೆ ಹಾಲಿ ಪಟ್ಟಾದಾರ ಎನ್.ರಂಗಾರೆಡ್ಡಿ ಇವರು ದಿ:29-08-2008 ರಂದು ತಮಗೆ ವಿಕ್ರಯ ಕರಾರು ಪತ್ರ ಪ್ರಕಾರ ರೂ, 8,00,000/-ಗಳಿಗೆ ಮಾರಾಟ ಮಾಡಿ, ಅದರಲ್ಲಿ ರೂ, 4,51,000/-ಗಳನ್ನು ತೆಗೆದುಕೊಂಡು ತಮ್ಮ ಸ್ವಾಧೀನಕ್ಕೆ ಬಿಟ್ಟು ಕೊಟ್ಟು ಈಗ ಸಿರಾಜುದ್ದೀನ್ ಎಂಬುವರಿಗೆ ಮಾರಾಟ ಮಾಡಿರುತ್ತಾರೆ, ಅಲ್ಲದೇ ದಾವಾ ಆಸ್ತಿಗಳ ಕುರಿತು ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಕರಣ ಸಂಖ್ಯೆ:ಓ.ಎಸ್.ನಂ:79/2010 ವಿಚಾರಣೆ ಇನ್ನೂ ಬಾಕಿ ಇರುವುದರಿಂದ, ಸದ್ರಿಯವರ ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು ವಾದ ಮಂಡಿಸಿರುತ್ತಾರೆ.

ಈ ಕುರಿತು ಕಡತದಲ್ಲಿ ಲಭ್ಯ ಹಾಗೂ ಹಾಜರುಪಡಿಸಿದ ದಾಖಲೆ ಪರಿಶೀಲಿಸಲಾಗಿ, ಸಿರುಗುಪ್ಪ ಗ್ರಾಮದ ಸ,ನಂ.490 ವಿ:2-41, ಸ,ನಂ.494, ವಿ:2-54 ಎಕ್ರೆ ಜಮೀನಿಗೆ ಸಂಭಂದಿಸಿ ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಕರಣ ಸಂಖ್ಯೆ:ಓ.ಎಸ್.ನಂ:79/2010 ವಿಚಾರಣೆ ಇನ್ನೂ ಬಾಕಿ ಇರುವುದರಿಂದ, ಮಾನ್ಯ ನ್ಯಾಯಾಲಯದ ಅಂತಿಮ ಆದೇಶಕ್ಕೆ ಒಳಪಟ್ಟು ಈ ನ್ಯಾಯಾಲಯದ ಪ್ರಕರಣವನ್ನು ಮುಕ್ತಾಯಗೊಳಿಸಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/30/2010-11** **ದಿ:01-08-2016**

**ಆದೇಶ**

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಸಿರುಗುಪ್ಪ ಗ್ರಾಮದ ಸ,ನಂ.490 ವಿ:2-41, ಸ,ನಂ.494, ವಿ:2-54 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ **ಎನ್.ರಂಗಾರೆಡ್ಡಿ ತಂದೆ ಹುಚ್ಚಾರೆಡ್ಡಿ** ಹೆಸರಿಗೆ ಪಟ್ಟಾ ಇದ್ದು, ನೋಂದಣಿ ಕ್ರಯಪತ್ರ ಸಂಖ್ಯೆ:1115/2010-11 ದಿ:11-06-2010 ರ ಪ್ರಕಾರ ಕ್ರಯ ಹೊಂದಿದ **ಟಿ.ಸಿರಾಜುದ್ದೀನ್ ತಂದೆ ಅಬ್ದುಲ್‌ರಜಾಕ್‌ಸಾಬ್** ಹೆಸರಿಗೆ ಹಕ್ಕು ಬದಲಾವಣೆ ಮಾಡಬಾರದೆಂದು, ಸದ್ರಿ ಪ್ರಕರಣಕ್ಕೆ ಸಂಭಂದಿಸಿ, **ಹಂಡಿ ಸಿದ್ದಪ್ಪ ತಂದೆ ನಿಂಗಪ್ಪ** ಇವರು ಮಾನ್ಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಕರಣ ಸಂಖ್ಯೆ:ಓ.ಎಸ್.ನಂ:79/2010 ವಿಚಾರಣೆ ಇನ್ನೂ ಬಾಕಿ ಇರುವುದರಿಂದ, ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದ ಅಂತಿಮ ಆದೇಶಕ್ಕೆ ಉಭಯತರೂ ಬದ್ಧರಾಗಿರಲು ಸೂಚಿಸಿ, ಈ ನ್ಯಾಯಾಲಯದ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:01-08-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

**ತಹಶೀಲ್ದಾರರು,ಸಿರುಗುಪ್ಪ**

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ